**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ.100/2020**

**ಸಿ.ಡಬ್ಲ್ಯೂ:4 ಪಿ.ಡಬ್ಲ್ಯೂ: 3**

ಸಾಕ್ಷಿದಾರನ ಹೆಸರು : ಸಿ ಚಿದಾನಂದ
ತಂದೆಯ ಹೆಸರು : ಸಿ ತಿಮ್ಮಪ್ಪ
ವಯಸ್ಸು : 66 ವರ್ಷ
ಕೆಲಸ : ಮುಖ್ಯ ಪೇದೆ
ವಾಸ : ಚೊರನೂರು ಪೋಲಿಸ್ ಠಾಣೆ

**ಸಾಕ್ಷಿಗೆ ದಿನಾಂಕ:20.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನಾನು 16.08.2016 ರಿಂದ 2020 ರವರೆಗೂ ಮುಖ್ಯಪೇದೆ ಆಗಿ ತೆಕ್ಕಲಕೋಟೆಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:09.09.2019 ರಂದು ನಾನು ಸಿರಿಗೇರಿ ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ಬಂದು ಮೊಹರಂ ಹಬ್ಬದ ರಾತ್ರಿ ಗಸ್ತು ಕರ್ತವ್ಯಕ್ಕೆ ಕರೆದ್ದು ನಾನು ಮತ್ತು ಚಾಸಾ 5 ರವರು ಪೆಟ್ರೋಲಿಂಗ್ ಕರ್ತವ್ಯ ಮಾಡುತ್ತಾ ರಾತ್ರಿ 1 ಗಂಟೆಗೆ ನಿಟ್ಟೂರು ಗ್ರಾಮಕ್ಕೆ ಹೋಗಿ ಅಲ್ಲಿ ಗಸ್ತು ಮಾಡುತ್ತಿದ್ದಾಗ ಚಾಸಾ 1 ರವರಿಗೆ ಹನುಮೇಶ್ ಮತ್ತು ಒಬಳೇಶ ಎಂಬ ವ್ಯಕ್ತಿಗಳು ಮೊಹರಂ ಹಬ್ಬದ ನಿಮಿತ್ತ ಮದ್ಯ ಮಾರಾಟ ನಿಷೇದ ಇದ್ದರು ಸಹ ಮದ್ಯ ವನ್ನು ಸಂಗ್ರಹ ಮಾಡಿ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ನನ್ನ ಮೂಲಕ ಇಬ್ಬರು ಪಂಚರನ್ನು ಬರಮಾಡಿಕೊಂಡು ಹಾರೆಕಲ್ಲು ಗ್ರಾಮದ ರಮೇಶ್ ಗೋಡೌನ್ ಹತ್ತಿರ ಬೆಳಗಿನ ಜಾವ 1.50 ಗಂಟೆಗೆ ಮರೆಮಾಡಿ ನಿಂತು ನೋಡಲಾಗಿ ಇಬ್ಬರು ವ್ಯಕ್ತಿಗಳು ಮದ್ಯ ಮಾರಾಟದಲ್ಲಿ ತೊಡಗಿರುವುದನ್ನು ನೋಡಿ ನಾವು ಮತ್ತು ಪಂಚರು ಚಾಸಾ 1 ದಾಳಿ ಮಾಡಿ ಅವರನ್ನು ಹಿಡಿದೆವು. ಅವರನ್ನು ಓಬಳೇಶ ತಂದೆ ಗೋಸಿ ರಾಮಯ್ಯ ಎಂಬುವವನ ವಶದಲ್ಲಿ ರೂ.8880/- ಹಣ ಮದ್ಯ ಮಾರಾಟ ಮಾಡಿ ಬಂದ ಹಣ ದೊರೆಯಿತು. ಇನ್ನೊಬ್ಬ ವ್ಯಕ್ತಿಯನ್ನು ವಿಚಾರಿಸಲಾಗಿ ತನ್ನ ಹೆಸರು ಹನುಮೇಶತಂದೆ ರಾಮಣ್ಣ ಎಂದು ಇತ್ತು. ಅವರ ಬಳಿ ವಿವಿಧ ಕಂಪನಿಯ ಮದ್ಯದ ಪೌಚಗಳು ಇದ್ದವು. ಅವು ಒಟ್ಟಾರೆಯಾಗಿ 93 ಲೀ ಇದ್ದವು. ಸದರಿ ಮದ್ಯ ಮಾರಾಟ ಮಾಡಲು ಸರ್ಕಾರದಿಂದ ಪರವಾನಗಿ ಇದೆಯಾ ಎಂದು ವಿಚಾರಿಸಲಾಗಿ ಸದರಿಯವರು ಇಲ್ಲ ಎಂದು ತಿಳಿಸಿರುತ್ತಾರೆ. ಅವರ

ಹತ್ತಿರ ಇದ್ದ ಮದ್ಯವನ್ನು ಸಿರುಗುಪ್ಪ ಪಟ್ಟಣದ ವೈನ್ ಶಾಪ ಮಾಲೀಕರಿಂದ ಖರೀದಿ ಮಾಡಿಕೊಂಡು ಬಂದು ಅಕ್ರಮವಾಗಿ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಬೆಳಿಗ್ಗೆ 1.50 ರಿಂದ 2.50 ಗಂಟೆ ವರೆಗೆ ಜಪ್ತುಪಡಿಸಿಕೊಂಡಿರುತ್ತೇವೆ. ಅವುಗಳಿಂದ ತಲಾ ಒಂದರಂತೆ ಟೆಟ್ರಾ ಪ್ಯಾಕೆಟ್ ನ್ನು ಸ್ಯಾಂಪಲ್ ಗಾಗಿ ತೆಗೆದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಬಾಯಿಕಟ್ಟಿ ಅರಗಿನಿಂದ ಸೀಲ್ ಮಾಡಿ ಚಾಸಾ 1 ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿಲಾಯಿತು. ಪಂಚನಾಮೆ ಬರೆದು ಜಪ್ತುಪಡಿಸಿಕೊಂಡ ಮದ್ಯ ಮತ್ತು ಆರೋಪಿತರೊಂದಿಗೆ ತೆಕ್ಕಲಕೊಟೆ ಠಾಣೆಗೆ ಬಂದು ಗಣಕ ಯಂತ್ರದಲ್ಲಿದೂರನ್ನು ತಯಾರಿಸಿ ಚಾಸಾ 1 ರವರು ಪೊಲೀಸ್ ಠಾಣೆಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೊಪಿ ನಂ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿ ನಂ 1 ರಿಂದ 4 ರ ಪರ ವಕೀಲರಿಂದಃ**

3. ಮಾಹಿತಿ ಬಂದಾಗ ನಿಟ್ಟೂರು ಬಸ್ ನಿಲ್ದಾಣದ ಬಳಿ ಇದ್ದೆವು. ನಾವು ಒಟ್ಟು 4 ಜನ ಇದ್ದೆವು. ನಿಟ್ಟೂರು ಬಸ್ ಸ್ಟಾಂಡ್ ಬಳಿ ನಾವು ಮಾತ್ರ ಇದ್ದೆವು. ಸಿರಿಗೇರಿ ಯಿಂದ ನಡುವಿ ದಾರಿಯಲ್ಲಿ ನಿಟ್ಟೂರಿಗೆ ಬಂದೆವು. ನಿಟ್ಟೂರು ಬಸ್ ನಿಲ್ದಾಣದ ಬಳಿ ಒಂದು ಮಸೀದಿ ಇದ್ದು ಆ ದಿನ ಮೊಹರಂ ಇದಿದ್ದರಿಂದ ಅಲ್ಲಿ ಹಲವಾರು ಜನ ಇದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ನೀಲಿ ಬಣ್ಣದ ಅಂಗಿ ಧರಿಸಿರುವ ವ್ಯಕ್ತಿ ಹೆಸರು ಒಬಳೇಶ ಹಾಗೂ ಬಿಳಿ ಬಣ್ಣದ ಅಂಗಿ ಧರಿಸಿರುವ ವ್ಯಕ್ತಿ ಹೆಸರು ಹನುಮೇಶ. ( ಆರೋಪಿತರ ಹೆಸರನ್ನು ಕೇಳಲಾಗಿ ನೀಲಿ ಬಣ್ಣದ ಅಂಗಿ ಧರಿಸಿರುವ ವ್ಯಕ್ತಿ ಹೆಸರು ಹನುಮೇಶ ಹಾಗೂ ಬಿಳಿ ಬಣ್ಣದ ಅಂಗಿ ಧರಿಸಿರುವ ವ್ಯಕ್ತಿ ಒಬಳೇಶ ಎಂದು ನುಡಿದಿರುತ್ತಾರೆ). ಆ ದಿನ ಪಂಚರನ್ನು ನಾನು ಕರೆದುಕೊಂಡು ಬಂದಿರುತ್ತೇನೆ. ಅವರು ಮೊದಲು ನನಗೆ ಪರಿಚಯ ಇದ್ದಿಲ್ಲ. ಪಂಚರನ್ನು ಯಾವ ಜಾಗದಿಂದ ಕರೆದುಕೊಂಡು ಬಂದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪಂಚರ ವಿಳಾಸ ಹೇಳಲು ಆಗುವುದಿಲ್ಲ. ಘಟನಾ ಸ್ದಳದ ಬಳಿ ಇದ್ದ ಗೋಡೌನ್ ಹೇಗೆ ಇತ್ತು ಎಂದು ಹೇಳಲಾಗುವುದಿಲ್ಲ, ಕಾರಣ ಆಗ ಕತ್ತಲು ಆಗಿತ್ತು. ಘಟನಾ ಸ್ದಳದಲ್ಲಿ ಆರೋಪಿತರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಯಾವ ಯಾವ ಬ್ರ್ಯಾಂಡನ ಎಷ್ಟು ಮದ್ಯ ಇತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಜಪ್ತಪಡಿಸಿದ ನಗದು ಹಣ ಯಾವ ಮುಖ ಬೆಲೆಯ ನೋಟುಗಳನ್ನು ಹೊಂದಿರುತ್ತದೆ ಎಂದು ಹೇಳಲಾಗುವುದಿಲ್ಲ. ಪಂಚನಾಮೆಯನ್ನು

ಶಂಕರಪ್ಪ ಎನ್ನುವವರು ಬರೆದಿರುತ್ತಾರೆ. ಪಂಚನಾಮೆಗೆ ಪಂಚರು, ಚಾಸಾ 1 ರವರು ಸಹಿ ಮಾಡಿರುತ್ತಾರೆ. ಚಾಸಾ 1 ನಮ್ಮ ಮೇಲಾಧಿಕಾರಿ ಎಂದರ ಸರಿ. ಯಾವುದೇ ಪಂಚನಾಮೆ ಹಾಗೂ ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರ ಸುಳ್ಳು ದೂರು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿತರಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**

**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 103/2020</u>**

**<u>ಸಿ.ಡಬ್ಲ್ಯೂಃ 8 ಪಿ.ಡಬ್ಲ್ಯೂಃ 4</u>**

ಸಾಕ್ಷಿದಾರನ ಹೆಸರು : ಶಂಕರಪ್ಪ
ತಂದೆಯ ಹೆಸರು : ದೋರಣ್ಣ
ವಯಸ್ಸು : 47 ವರ್ಷ
ಕೆಲಸ : ಮುಖ್ಯ ಪೇದೆ
ವಾಸ : ಸಿರುಗುಪ್ಪ

**<u>ಸಾಕ್ಷಿಗೆ ದಿನಾಂಕಃ20.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನಾನು 08.07.2019 ರಿಂದ 30.10.2023 ವರೆಗೂ ತೆಕ್ಕಲಕೋಟೆ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ08.11.2019 ರಂದು ಮಧ್ಯಾಹ್ನ 3.30 ಗಂಟೆಗೆ ತಾಲೂಕು ಕಚೇರಿಯಲ್ಲಿದ್ದಾಗ ಬಳ್ಳಾರಿ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಒಬ್ಬ ಎಎಸ್ ಐ ಮತ್ತು ಎಚ್ ಸಿ ತಾಲೂಕು ಕಚೇರಿಗೆ ಬಂದಿದ್ದು ಎಸ್ ಪಿ ಬಳ್ಳಾರಿ ರವರ ಆದೇಶದಂತೆ ತೆಕ್ಕಲಕೋಟೆಯಲ್ಲಿ ಹಳೆ ಪೋಲೀಸ್ ಠಾಣೆ ಎದುರುಗಡೆ ಒಂದು ಮನೆಯಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಇದ್ದು ಎಸ್ ಪಿ ಬಳ್ಳಾರಿ ರವರ ಖಚಿತ ಮಾಹಿತಿ ಬಂದಿದ್ದರಿಂದ ದಾಳಿ ಮಾಡಲು ಸಹಕರಿಸುವಂತೆ ಚಾಸಾ 1 ರವರಿಗೆ ತಿಳಿಸಿದರು ಚಾಸಾ 1 ರವರ ತಹಶೀಲ್ದಾರವರಿಗೆ ಮಾಹಿತಿ ನೀಡಿ ಸುಮಾರು 4.00 ಗಂಟೆಗೆ ಇಬ್ಬರು ಪಂಚರನ್ನು ಬರಮಾಡಿಕೊಂಡು ಸದರಿಯವರಿಗೆ ವಿಷಯ ತಿಳಿಸಿದ್ದು ಅವರು ಒಪ್ಪಿದ ಮೇರೆಗೆ 4.30 ಗಂಟೆಗೆ ಪಂಚರು , ಚಾಸಾ 1 , ಎಎಸ್ ಐ ಮತ್ತು ಎಚ್ ಸಿ ರವರು ಸಿರುಗುಪ್ಪ ತಾಲೂಕು ಕಚೇರಿಂದ ತೆಕ್ಕಲಕೋಟೆ ಪೊಲೀಸ್ ಠಾಣೆಗೆ ಹೋಗಿ ಚಾಸಾ 4 ರವರಿಗೆ ವಿಷಯ ತಿಳಿಸಿ ದಾಳಿ ಮಾಡಲು ಸಹಕರಿಸಲು ಕೇಳಿದಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಚಾಸಾ 1, 4, ನಾನು, ಚಾಸಾ 7, 9, 10 ಮತ್ತು ಎಎಸ್ ಐ ರವರು ಹಾಗೂ ಪಂಚರು ಸೇರಿ ಸುಮಾರು 5.30 ಗಂಟೆಗೆ ಹಳೆ ಪೊಲೀಸ್ ಠಾಣೆ ಹತ್ತಿರ ಹೋದಾಗ ಚಾಸಾ 1 ರವರು ಒಂದು ಮನೆಯನ್ನು ತೋರಿಸಿದ್ದು ಆ ಮನೆಯಲ್ಲಿ ಹೋಗಿ ನೋಡಿದಾಗ ಆ ಮನೆಯ ಬಾಗಿಲು ತೆಗೆದಿದ್ದು ಮನೆಯಲ್ಲಿ ಯಾರು ಇರಲಿಲ್ಲ. ನಾವೆಲ್ಲರೂ ಒಳಗೆ ಹೋಗಿ ನೋಡಿದಾಗ ಒಂದು ರೂಂನಲ್ಲಿ ಸರ್ಕಾರದ ಪಡೀತರ ಅಕ್ಕಿಯನ್ನು ವಿವಿಧ ಚೀಲಗಳಲ್ಲಿ

ತುಂಬಿ ಇಟ್ಟಿದ್ದು ಕಂಡು ಬಂದಿತ್ತು. ನಂತರ ಪಂಚರ ಸಮಕ್ಷಮ ಒಂದು ಚೀಲವನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಪಡಿತರ ಅಕ್ಕಿ ಇತ್ತು. ಅಲ್ಲಿ ಸುಮಾರು 100 ಚೀಲಗಳಲ್ಲಿ ಒಂದು ಚೀಲದಲ್ಲಿ ಅಂದಾಜು 50 ಕೆಜಿ ತೂಕ ಇರುವ ಪಡಿತರ ಅಕ್ಕಿ ಇರುವುದು ಕಂಡುಬಂದಿರುತ್ತದೆ. ನಂತರ ಆಹಾರ ವಿಶ್ಲೇಷಣೆಗಾಗಿ ಎಲ್ಲ ಚೀಲಗಳಿಂದ ಸ್ವಲ್ಪ ಸ್ವಲ್ಪ ಅಕ್ಕಿಯಂತೆ ಒಟ್ಟು ಒಂದೂವರೆ ಕೆಜಿ ಪಡಿತರ ಅಕ್ಕಿಯನ್ನು ಸ್ಯಾಂಪಲ್ ಗಾಗಿ ಬೇರೆ ತೆಗೆದು ಬಿಳಿ ಬಟ್ಟೆಯಲ್ಲಿ ಹಾಕಿ ಅದರ ಬಾಯಿ ಕಟ್ಟಿ ಪಂಚರ ಸಮಕ್ಷಮ ಸೀಲ್ ಮಾಡಿ ಚಾಸಾ 1, ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಪಂಚನಾಮೆ ಮಾಡಲಾಗಿರುತ್ತದೆ.

3. ಚಾಸಾ 1 ರವರು ಈ ಹಿಂದೆ 10.10.2019 ರಂದು ಅದೇ ಮನೆಯಲ್ಲಿ ಪಡಿತರ ಅಕ್ಕಿಯ ಕುರಿತು ದಾಳಿ ನಡೆಸಿ ಪ್ರಕರಣ ದಾಖಲಾಗಿತ್ತು. ಮನೆ ಮಾಲೀಕನ ಹೆಸರು ವೀರೇಶಪ್ಪ ಎಂದು ಇದ್ದು ಈಗಲೂ ಸಹ ವೀರೇಶಪ್ಪನೆ ಸದರಿ ಪಡಿತರ ಅಕ್ಕಿಯನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದಾನೆ ಎಂದು ತಿಳಿಸಿದರು. ನಂತರ ಚಾಸಾ 1 ರವರು ಜಪ್ತುಪಡಿಸಿದ ಪಡಿತರ ಅಕ್ಕಿಯನ್ನು ಟ್ರಾಕ್ಟರ್ ನಂಃ ಕೆಎ 34 ಪಿ 6103 ನೇದ್ದರಲ್ಲಿ ಲೋಡ್ ಮಾಡಿಕೊಂಡು ತೂಕ ಮಾಡಿಸಿ ನಂತರ ಸಿರುಗುಪ್ಪ ಪಟ್ಟಣದ ಕೆ ಎಫ್ ಸಿಎಸ್ ಸಿ ಗೋಧಾಮಿಗೆ ಹಸ್ತಾಂತರಿಸಿ ರಶೀದಿ ಪಡೆದರು ನಂತರ ಪೋಲಿಸ ಠಾಣೆಗೆ ಬಂದು ಈ ಕುರಿತು ದೂರನ್ನು ದಾಖಲಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ : ಶ್ರೀ ಎಂ ಎಸ್ ಕೆಃ ವಕೀಲರಿಂದಃ**

4. ನನಗೆ ವಿಷಯ ಗೊತ್ತಾದಗ ಸಮಯ 04.00 ಗಂಟೆ ಆಗಿತ್ತು. ಘಟನಾ ಸ್ಥಳಕ್ಕೆ 10 ಜನ ಹೋದೆವು. ನಾವು ಇಲಾಖಾ ಜೀಪ್ ನಲ್ಲಿ ಹೋದೆವು. ಚಾಸಾ 1 ರವರು ನಮ್ಮ ಠಾಣೆಗೆ 4 ಗಂಟೆಗೆ ಬಂದರು. ಪಂಚರನ್ನು ಚಾಸಾ 1 ರವರು ಕರೆತಂದಿದ್ದರು. ಘಟನಾ ಸ್ಥಳ ಹಾಗೂ ನಮ್ಮ ಠಾಣೆಯ ಅಂತರ 600 ಮೀ ದೂರ ಇರುತ್ತದೆ. ಅಕ್ಕಿ ವಿವಿಧ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಇದ್ದವು. ಚಾಸಾ 1 ರವರು ಟ್ರ್ಯಾಕ್ಟರನ್ನು ಕರೆಯಿಸಿದರು. ಟ್ರ್ಯಾಕ್ಟರ್ ಯಾವ ಬಣ್ಣದ್ದು ಎಂದು ಗೊತ್ತಿಲ್ಲ. ಚಾಸಾ 1 ರವರು ಅಕ್ಕಿಯ ಚೀಲಗಳನ್ನು ಟ್ರ್ಯಾಕ್ಟರ್ ಗೆ ತುಂಬಿಸುವಾಗ ನಾನು ಮನೆಯ ಒಳಗೆ ಇದ್ದೆ. ಅಕ್ಕಿಯನ್ನು ಪರೀಕ್ಷೆ ಮಾಡಲು ಚಾಸಾ 1 ರವರ ಬಳಿ ಯಾವುದೇ ಸಲಕರಣೆ ಇರಲಿಲ್ಲ. ನಾವು ದಾಳಿ ನಡೆಸಿದ ಸ್ಥಳ ಆರೋಪಿಯ ಮನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಾನು ಬರೆದೆನು. ಪಂಚನಾಮೆಗೆ ನಾನು ಸಹಿ ಮಾಡಿಲ್ಲ. ದಾಳಿ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ. ದಾಳಿ ಮಾಡಿದಾಗ ಮನೆ ಹೊರಗೆ ಯಾರು ಇರಲಿಲ್ಲ. ಅಕ್ಕಪಕ್ಕದಲ್ಲಿ ಮನೆಗಳು ಇದ್ದವು. ಅವರು